ವಿಜಯವಾಣಿ e-Paper

# ಕೆರೆಗಳನ್ನು ಕೇರ್ ಮಾಡಿದ್ರೆ ಉಳಿಗಾಲ: ಸ್ವರ್ಣವಲ್ಲಿ ಸ್ವಾಮೀಜಿ

## ■ ಶಿರಸಿಯಲ್ಲಿ 'ಕೆರೆ ಸಮ್ಮೇಳನ-2014' ■ ಜಲಮೂಲ ಸಂರಕ್ಷಣೆ ಸಂವಾದ ■ ಧಾರ್ಮಿಕ ನಾಯಕರ ಆಗಮನ ನಿರೀಕ್ಷೆ

**ಬೆಂಗಳೂರು:** ಮನುಷ್ಯ, ಪ್ರಾಣಿಗಳ ಕುಡಿಯುವ ನೀರಿನ ಆವಶ್ಯಕತೆ ಪೂರೈಸುವ ಜತೆಗೆ ಕೋಟ್ಯಂತರ ಜಲಚರಗಳ ವಾಸಸ್ಥಾನವಾದ ಕೆರೆಗಳನ್ನು ಸಂರಕ್ಷಿಸಿದರೆ ಮಾತ್ರ ಮುಂದಿನ ಪೀಳಿಗೆಗೆ ಉತ್ತಮ ವಾತಾವರಣ ಬಿಟ್ಟು ತೆರಳಬಹುದು ಎಂದು ಸೋಂದಾ ಸ್ವರ್ಣವಲ್ಲಿ ಮಠಾಧೀಶ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಬುಧವಾರ ಅಭಿಪ್ರಾಯಪಟ್ಟರು.

ಕೆರೆಗಳ ಸಂರಕ್ಷಣೆ ಕುರಿತು ನ.13ರಿಂದ 15ರವರೆಗೆ ಶಿರಸಿಯಲ್ಲಿ ನಡೆಯಲಿರುವ 14ನೇ 'ಕೆರೆ-ಸಮ್ಮೇಳನ'ದ ಪೂರ್ವಭಾವಿಯಾಗಿ ಭಾರತೀಯ ವಿಜ್ಞಾನ ಮಂದಿರದಲ್ಲಿ ಆಯೋಜಿಸಿದ್ದ ವಿಚಾರಸಂಕಿರಣದಲ್ಲಿ ಮಾತನಾಡಿದರು.

ಅತಿ ಹೆಚ್ಚು ಜೀವಿಗಳು ಜಲದಲ್ಲಿವೆ. ಮನುಷ್ಯಕೇಂದ್ರಿತ ಅಭಿವೃದ್ಧಿಯ ಕಾರಣದಿಂದಾಗಿ ಕೆರೆಗಳು ನಾಶವಾಗುತ್ತಿವೆ. ಉತ್ತರಕನ್ನಡ ಜಿಲ್ಲೆ ಪರಿಸರ ಸಮೃದ್ಧವಾಗಿದೆ ಎಂದು ಎಲ್ಲರೂ ಭಾವಿಸುತ್ತಿದ್ದಾರೆ. ಆದರೆ ಸ್ವರ್ಗದಂತಿದ್ದ ಉತ್ತರಕನ್ನಡ ನರಕವಾಗುತ್ತಿದೆ. ಪರಿಸರ ನಾಶದಿಂದಾಗಿ ಈಗಾಗಲೇ ನರಕವಾಗಿರುವ ಬೆಂಗಳೂರು ಘೋರ ನರಕವಾಗುತ್ತಿದೆ ಎಂದರು.

ದೇವಸ್ಥಾನಗಳ ಬಳಿ ನಿರ್ಮಿಸಿದ್ದ ತೀರ್ಥಕೆರೆಗಳೂ ಹಾಳಾಗುತ್ತಿವೆ. ಕೆರೆಗಳ ಜತೆಗೆ ಪರಿಸರ ಸಂರಕ್ಷಣೆಗೆ ವಿದ್ಯಾರ್ಥಿಗಳು, ವಿಜ್ಞಾನಿಗಳು ಹಾಗೂ ರೈತ ಸಂಶೋಧಕರು



ಭಾರತೀಯ ವಿಜ್ಞಾನ ಮಂದಿರದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಸ್ವರ್ಣವಲ್ಲಿ ಶ್ರೀಗಳು ಉದ್ಘಾಟಿಸಿದರು.

ಒಂದೆಡೆ ಸೇರುವ ಶಿರಸಿ ಸಮ್ಮೇಳನಕ್ಕೆ ಬೆಂಗಳೂರಿಗರು ಆಗಮಿಸಿ ಚರ್ಚಿಸಬೇಕು ಎಂದರು.

**7 ಜನರಿಗೊಂದು ವೃಕ್ಷ:** ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ ಟಿ.ವಿ. ರಾಮಚಂದ್ರ ಮಾತನಾಡಿ, 95 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯಿರುವ ಬೆಂಗಳೂರಿನಲ್ಲಿ ಕೇವಲ 14.78 ಲಕ್ಷ ವೃಕ್ಷಗಳಿವೆ. ಅಂದರೆ 7 ಜನಕ್ಕೊಂದು ವೃಕ್ಷ. ಮರಗಳು ಹೆಚ್ಚಿರುವ ಸ್ಥಾನದಲ್ಲಿ ಇತರೆಡೆಗಿಂತ ಕನಿಷ್ಠ 2 ಡಿಗ್ರಿ

### ನ. 13ರಿಂದ ಸಮ್ಮೇಳನ

**ಕೆ**ರೆಗಳು, ಜಲಮೂಲಗಳು ನಿರ್ವಹಣೆ, ಸಂರಕ್ಷಣೆ ಜಾಗೃತಿ ಮೂಡಿಸಲು 2000ನೇ ಇಸವಿಯಿಂದ ನಡೆಯುತ್ತಿರುವ ಕೆರೆ ಸಮ್ಮೇಳನ ಈ ಬಾರಿ ಶಿರಸಿ ತಾಲೂಕಿನಲ್ಲಿ ನಡೆಯಲಿದೆ. ನ.13ರಂದು ಸ್ವರ್ಣವಲ್ಲಿ ಮಹಾಸಂಸ್ಥಾನದಲ್ಲಿ, 14ರಂದು ಲಯನ್ಸ್ ಶಿಕ್ಷಣ ಸಂಸ್ಥೆಯಲ್ಲಿ ಹಾಗೂ 15ರಂದು ಭೈರುಂಬೆಯ ಶ್ರೀ ಶಾರದಾಂಬಾ ಹೈಸ್ಕೂಲ್‌ನಲ್ಲಿ ವಿಚಾರಗೋಷ್ಠಿ, ತಾಂತ್ರಿಕ ಗೋಷ್ಠಿ, ನೀತಿ ನಿರೂಪಣೆ ನಡೆಯಲಿವೆ. ಸೋಂದಾ ಸ್ವರ್ಣವಲ್ಲಿ ಸ್ವಾಮೀಜಿ ಸಮ್ಮೇಳನದ ಗೌರವ ಅಧ್ಯಕ್ಷರಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಚಿವರು, ಅಧಿಕಾರಿಗಳು ಭಾಗವಹಿಸಲಿದ್ದಾರೆ. ಉತ್ತರ ಕರ್ನಾಟಕದ 110 ಶಾಲೆಗಳಲ್ಲಿ ಈಗಾಗಲೇ ಕೆರೆ ಸಂರಕ್ಷಣೆ ಜಾಗೃತಿ ಅಭಿಯಾನ ನಡೆಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ತೀರ್ಥಕೆರೆಗಳ ಕುರಿತ ಸಂವಾದದಲ್ಲಿ ಧಾರ್ಮಿಕ ನಾಯಕರು ಆಗಮಿಸುವ ನಿರೀಕ್ಷೆ ಇದೆ.

ಕಡಿಮೆ ಉಷ್ಣಾಂಶವಿದೆ. ಗುಜರಾತ್‌ನ ಗಾಂಧಿನಗರದಲ್ಲಿ 4 ಜನರಿಗೊಂದು ಹಾಗೂ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಇಬ್ಬರಿಗೊಂದು ವೃಕ್ಷವಿದೆ. ಕನಿಷ್ಠ ಒಬ್ಬರಿಗೊಂದು ವೃಕ್ಷವಾದರೆ ಮಾತ್ರ ಬೆಂಗಳೂರಿನ ಮಾಲಿನ್ಯ ಸಮಸ್ಯೆಗೆ ಮುಕ್ತಿ ದೊರೆಯಲಿದೆ. ಕ್ರಿ.ಶ. 1800ರಲ್ಲಿ ಬಿರುಬೇಸಿಗೆಯಲ್ಲಿ ಸರಾಸರಿ 15 ಡಿಗ್ರಿಯಿದ್ದ ಬೆಂಗಳೂರಿನ ಉಷ್ಣಾಂಶ ಇದೀಗ 37 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗಿದೆ. ಇದೀಗ ಅನುಸರಿಸುತ್ತಿರುವ ಅಭಿವೃದ್ಧಿ ಮಾರಿ ಮುಂದುವರಿದರೆ 2020ಕ್ಕೆ ಶೇ.70 ಬೆಂಗಳೂರು ಕಾಂಕ್ರಿಟ್‌ಮಯವಾಗುತ್ತದೆ ಎಂದರು.

**ಎತ್ತಿನಹೊಳೆ ಅವಶ್ಯಕತೆಯಿಲ್ಲ:** ಎತ್ತಿನ ಹೊಳೆ ಯೋಜನೆಯಿಂದ ಕೋಲಾರದ ಜನತೆಗಾಗಲಿ ಅಥವಾ ಪಶ್ಚಿಮಘಟ್ಟಕ್ಕಾಗಲೀ ಉಪಯೋಗವಿಲ್ಲ. ಅಭಿವೃದ್ಧಿಯ ಭರಾಟೆಯಲ್ಲಿ, ದಶಕಗಳ ಹಿಂದೆ ಕೋಲಾರದಲ್ಲಿದ್ದ ಸಾವಿರಾರು ಕೆರೆಗಳನ್ನು ಮುಚ್ಚಲಾಗಿದೆ. ಅವುಗಳನ್ನು ಪುನರುಜ್ಜೀವನಗೊಳಿಸಿದರೆ ಸಾಕು ಕೋಲಾರ ಜನತೆಯ ಸಮಸ್ಯೆ ಬಗೆಹರಿಯಲಿದೆ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರಿನ ವೃಕ್ಷಗಳು ಹಾಗೂ ಪ್ರವಾಹ ಪರಿಸ್ಥಿತಿಯ ಕುರಿತು ಭಾರತೀಯ ವಿಜ್ಞಾನ ಸಂಸ್ಥೆ ವಿಜ್ಞಾನಿಗಳು ಸಿದ್ಧಪಡಿಸಿರುವ ವರದಿಗಳು, ಶಿರಸಿ ಸಮ್ಮೇಳನದ ಬ್ಯಾನರ್, ಮಾಹಿತಿ ಪತ್ರವನ್ನು ಬಿಡುಗಡೆ ಮಾಡಲಾಯಿತು. ಭಾರತೀಯ ವಿಜ್ಞಾನ ಸಂಸ್ಥೆ ವಿಜ್ಞಾನಿ ಟಿ.ವಿ. ರಾಮಚಂದ್ರ, ಜೀವವೈವಿಧ್ಯ ಮಂಡಳಿ ಸದಸ್ಯ ಕಾರ್ಯದರ್ಶಿ ಆರ್.ಕೆ. ಸಿಂಗ್, ಪರಿಸರವಾದಿ ಅನಂತ ಹೆಗಡೆ ಆಶೀಸರ, ವಾಗ್ದೇವಿ ವಿದ್ಯಾಸಂಸ್ಥೆ ಅಧ್ಯಕ್ಷ ಹರೀಶ್ ಇತರಿದ್ದರು.